# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 877 (1025) |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷದಲ್ಲಿ ಶಿವಮೊಗ್ಗ ಜಿಲ್ಲೆ, ಭದ್ರಾ ಜಲಾಶಯದ ಎಡದಂಡೆ ನಾಲೆಯಲ್ಲಿ ಸೋರಿಕೆಯಾಗುತ್ತಿದ್ದ ನೀರನ್ನು ನಿಲ್ಲಿಸಲು Crust Gate and Emergency Gate ದುರಸ್ಥಿಗಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ವೆಷ್ಟು; (ವಿವರ ನೀಡುವುದು) | ಭದ್ರಾ ಅಣೆಕಟ್ಟೆಯಲ್ಲಿ ಎಡದಂಡೆ ನಾಲೆಗೆ ಇರುವ ಸರ್ವಿಸ್ ಗೇಟ್ ಮತ್ತು ಎಮರ್ಜೆನ್ಸಿ ಗೇಟುಗಳಿಂದ ನಾಲೆಯಲ್ಲಿ 180 ಕ್ಯೂಸೆಕ್ಸ್‌ನಷ್ಟು ನೀರು ಸೋರಿಕೆಯಾಗುತ್ತಿದ್ದ ಹಿನ್ನೆಲೆಯಲ್ಲಿ, ದುರಸ್ತಿ ಕಾರ್ಯ ಕೈಗೊಳ್ಳುವ ಸಂಬಂಧ ಸರ್ಕಾರದ ಆದೇಶ ದಿನಾಂಕ:15.03.2024ರಲ್ಲಿ ರೂ.715.00 ಲಕ್ಷ ಅಂದಾಜು ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. |
| ಆ) | ಸದರಿ ಕಾಮಗಾರಿಗಳನ್ನು ಯಾವ ಗುತ್ತಿಗೆದಾರರಿಗೆ ಟೆಂಡರ್ ನೀಡಲಾಗಿದೆ; ಕಾಮಗಾರಿ ಪೂರ್ಣಗೊಂಡಿದೆಯೇ; ಇಲ್ಲದಿದ್ದಲ್ಲಿ ಪೂರ್ಣಗೊಳಿಸಲು ಬೇಕಾಗುವ ಕಾಲಾವಧಿ ಎಷ್ಟು; | ಸದರಿ ಕಾಮಗಾರಿಯನ್ನು M/s Apaar Infratech Private Limited, Contrctor, Bangalore ಇವರಿಗೆ ರೂ.493.40 ಲಕ್ಷಗಳಿಗೆ ವಹಿಸಲಾಗಿದ್ದು, ಭಾಗಶಃ (90%) ಪೂರ್ಣಗೊಂಡಿರುತ್ತದೆ. ಬಾಕಿ ಕಾಮಗಾರಿಯನ್ನು ಬೇಸಿಗೆ ಹಂಗಾಮಿನಲ್ಲಿ ನಾಲೆಯಲ್ಲಿ ನೀರಿನ ಹರಿವನ್ನು ನಿಲ್ಲಿಸಿದ ನಂತರ ಪೂರ್ಣಗೊಳಿಸಲಾಗುವುದು. |
| ಇ) | ಕಾಮಗಾರಿ ಪೂರ್ಣಗೊಂಡಿದ್ದರೆ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಲು ಇರುವ ಮಾನದಂಡಗಳೇನು; | ಕಾಮಗಾರಿಯು ಉನ್ನತ ಅಧಿಕಾರಿಗಳ ಪರಿವೀಕ್ಷಣೆ ಹಾಗೂ ಮಾರ್ಗದರ್ಶನ ಮತ್ತು ಇಲಾಖೆಯ ಇಂಜಿನಿಯರುಗಳ ಉಸ್ತುವಾರಿಯಲ್ಲಿ ನಡೆಯುತ್ತಿದ್ದು, ಗುಣ ನಿಯಂತ್ರಣ ವಿಭಾಗದಿಂದ ಕಾಮಗಾರಿಗೆ ಬಳಸುವ ಸಾಮಗ್ರಿಗಳನ್ನು ಹಾಗೂ ಕಾಂಕ್ರೀಟ್ ಕ್ಯೂಬ್‌ಗಳನ್ನು ಪರೀಕ್ಷೆಗೊಳಪಡಿಸಿ ಗುಣ ನಿಯಂತ್ರಣ ಪರೀಕ್ಷಾ ಫಲಿತಾಂಶಗಳನ್ನು ಪಡೆದು ಕಾಮಗಾರಿ ನಿರ್ವಹಿಸಲಾಗಿದೆ. |
| ಈ) | ಸದರಿ Gate ದುರಸ್ಥಿ ಕಾಮಗಾರಿ ಪೂರ್ಣಗೊಂಡ ನಂತರ ನೀರು ಹೆಚ್ಚಾಗಿ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದ ಕ್ರಮವೇನು? | ಸದರಿ ದುರಸ್ತಿ ಕಾಮಗಾರಿಯಿಂದಾಗಿ ಗೇಟಿನ ಸಿಲ್ ಬೀಮ್‌ನಲ್ಲಿ ಆಗುತ್ತಿದ್ದ ಸುಮಾರು 120 ಕ್ಯೂಸೆಕ್ಸ್ ರಷ್ಟು ಪ್ರಮಾಣದ ನೀರಿನ ಸೋರಿಕೆಯನ್ನು ತಡೆಗಟ್ಟಲಾಗಿದೆ. ಆದರೆ, ಪ್ರಸ್ತುತ, ಗೇಟಿನ ಮೇಲ್ಭಾಗದ ಅಣೆಕಟ್ಟಿನ ಕಟ್ಟಡಗಳ ರಂಧ್ರಗಳಿಂದ (from Masonry joints) ಸುಮಾರು 60 ಕ್ಯೂಸೆಕ್ಸ್ ನಷ್ಟು ನೀರಿನ ಸೋರಿಕೆಯನ್ನು ಗಮನಿಸಲಾಗಿದೆ. ಸದರಿ ಸೋರಿಕೆ ಈಗಾಗಲೇ ಕೈಗೊಂಡಿರುವ repairs to barrel portion of left bank canal sluice ಕಾಮಗಾರಿಗೆ ಹೊರತಾಗಿ ಇರುತ್ತದೆ. ಸದರಿ ಸೋರಿಕೆಯನ್ನು ತಡೆಗಟ್ಟುವ ಕಾಮಗಾರಿಯನ್ನು ವಿಶ್ವಬ್ಯಾಂಕ್ ನೆರವಿನ DRIP-II ಯೋಜನೆಯಡಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದ್ದು, ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಆದ್ಯತೆ ಮೇರೆಗೆ ಕೈಗೊಳ್ಳಲಾಗುವುದು. |

ಜಸಂಇ 41 ಎಂಎಲ್ಎ 2026

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ